ಶಿವನಿಂದಲೇ ಅವಳಿಗೆ ಸಹಿ ಹಾಕಲು ಹೇಳಿಸಬೇಕು. ನಾನು ಅಂದುಕೊಂಡಷ್ಟು ಕಾರ್ಯ ಸುಲಭವಲ್ಲ. ಮೊದಲೇ ಅವಳ ಹೃದಯ ತುಂಬಾ ದುರ್ಬಲವಾಗಿದೆ. ಅವಳು ಶಿವನನ್ನು ಕಂಡಿದ್ದೇ ಆಘಾತಗೊಂಡರೆ... ಏನಾದರೂ ಹೆಚ್ಚು ಕಡಿಮೆಯಾದರೆ... ಎಂಬ ಹೆದರಿಕೆ ಕಾಡಿದ್ದೂ ಉಂಟು. ಹಾಗಾದಲ್ಲಿ ತಕ್ಷಣ ಸುಧಾರಿಸಿಕೊಂಡು ಆಸ್ಪತ್ರೆಗೆ ಕರೆದುಕೊಂಡು ಹೋದರಾಯಿತು ಎಂದು ಸಮಾಧಾನಿಸಿಕೊಂಡೆ. ಅಂತೂ ಮನದಲ್ಲೇ ಗಟ್ಟಿ ನಿರ್ಧಾರ ಮಾಡಿ 'ಯಾರಿಗೋ ಶಿವನ ಡ್ರೆಸ್ ಬೇಕಾಗಿತ್ತಪಾ' ಎಂದು ಜಗ್ಗುನ ಹತ್ತಿರ ಕೇಳಿ ತೆಗೆದುಕೊಂಡು ಬಂದೆ. ಮೇಕಪ್ಪಿಗೆ ಬೇಕಾದ ಬಣ್ಣಗಳೂ ಖರೀದಿಯಾಗಿ ಕಪಾಟಿನಲ್ಲಿ ಕುಳಿತವು. ಸೋಮವಾರದ ಶುಭದಿನದಂದೇ ಸಾಕ್ಷಾತ್ಕಾರವಾದರೆ ಒಳಿತು ಎಂದುಕೊಂಡೆ.

ಸ್ವಲ್ಪ ತಡೀರಿ. ಹಿಂದಿನ ಪುರಾಣವನ್ನೆಲ್ಲಾ ಹೇಳದೇ 'ಧುತ್' ಎಂದು ಶಿವನನ್ನು ಪ್ರತ್ಯಕ್ಷಗೊಳಿಸಿದರೆ ನಿಮಗೆ ಅರ್ಥ ಮಾಡಿಕೊಳ್ಳುವುದು ಕಷ್ಟ. ಹಿನ್ನೆಲೆ ಹೇಳಬೇಕೆಂದರೆ ನಾನೂ ಒಳ್ಳೆಯವನೇ... ರಿ. ಸತ್ಕುಲ ಪ್ರಸೂತ. ಹುಬ್ಬಳ್ಳಿಯ ಹೆಸರಾಂತ ದೇಶಪಾಂಡೆ ಮನೆತನದ ಕುಡಿ. ಅಪ್ಪ ಮಹಾಬಲರಾವ್ ದೇಶಪಾಂಡೆ ಕೆನರಾ ಬ್ಯಾಂಕಿನಲ್ಲಿ ಮ್ಯಾನೇಜರ್ ಆಗಿದ್ದ. ಒಳ್ಳೆಯ ದಕ್ಷ ಅಧಿಕಾರಿ ಎಂಬ ಹೆಸರಿತ್ತು. ಮೂವರು ಮಕ್ಕಳು ನಾವು. 'ಪುತ್ಥಳಿಯಂತೆ' ಎಂದು ಅವ್ವ ಹೇಳಿಕೊಳ್ಳುವುದಿತ್ತು. ಹಾಗೇ ಇದ್ದೆವು ನಾವು. ದೃಷ್ಟಿಯಾಗುವಂಥ ಸಂಸಾರ. ದೊಡ್ಡವಳು ಪ್ರಭಾ. ಅಪ್ಪನ ರೂಪವನ್ನೇ ಎರಕ ಹೊಯ್ದಂತಿದ್ದಳು. ಕೊತಂಬ್ರಿ ಕಾಲೇಜಿನಲ್ಲಿ ಬಿ.ಎಸ್ಸಿ. ಮಾಡಿದ ನಂತರ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಎಮ್.ಎಸ್ಸಿ. ಕೂಡ ಮಾಡಿದಳು. ಒಂದು ವರ್ಷ ಲೆಕ್ಚರರ್ ಎಂದು ಕೆಲಸ ಮಾಡುವಷ್ಟರಲ್ಲೇ ಕಂಕಣ ಬಲ ಕೂಡಿ ಬಂದಿತ್ತು. ಹೆಣ್ಣು ಕೇಳಿಕೊಂಡು ಬಂದು ಮದುವೆಯಾದರು. ಅಪ್ಪನಿಗೆ ಕೊಂಬು ಮೂಡಿದ್ದರೆ ಅವ್ವ ಗರಿಗೆದರಿದ ನವಿಲಿನಂತೆ ಓಡಾಡಿದ್ದಳು. ಊರಿಗೆ ಊರೇ ಕೊಂಡಾಡುವಂತೆ ಕೃಷ್ಣ ಕಲ್ಯಾಣ ಮಂಟಪದಲ್ಲಿ ಮದುವೆಯಾಯಿತು. ಎರಡು ಬಾಣಂತನಗಳು ಮುಗಿಯುತ್ತಿದ್ದಂತೆ ಒಳ್ಳೆಯ ಆಫರ್ ಬಂತೆಂದು ಮಾಮಾ ಸಂಸಾರ ಸಮೇತ ಸೌದಿಅರೇಬಿಯಾದ ಜುಬೇಲ್ಗೆ ಹಾರಿದ. 'ಹೆಣ್ಣು ಹುಡುಗಿ, ಅಲ್ಲೆ ಕಲ್ಯೋದು ಬ್ಯಾಡಾ...' ಎಂದು ನಿರ್ಧರಿಸಿ ಸಹನಾಳನ್ನು ನಾವೇ ಇಟ್ಟುಕೊಂಡೆವು. ಕಳಿಸಿದ ಅಕ್ಕನ ಬಗ್ಗೆಯೇ ಅವ್ವ "ಹ್ಯಾಂಗಿರ್ತಾಳೋ ಏನೋ..." ಎಂದು ಅಲವತ್ತುಕೊಳ್ಳುವಷ್ಟರಲ್ಲಿ ಅಕ್ಕ "ಆರಾಮಿದ್ದೇವಿ" ಎಂದು ದಿನಕ್ಕೊಮ್ಮೆ ಫೋನು ಮಾಡಿದಾಗ ಅವ್ವನನ್ನೊಳಗೊಂಡು ಎಲ್ಲ ನಿರಾಳವಾದೆವು.

ಅಣ್ಣ ಕಿರಣನದ್ದೂ ಸುಂದರ ಸಂಸಾರವೇ. ಅಪ್ಪ ತಮ್ಮಂತೆ ಅವನನ್ನೂ ಬ್ಯಾಂಕಿನಲ್ಲೇ ಸೇರಿಸಿದರು. ಎಲ್ಲ ಸೇರಿ ಆರಿಸಿದ ಹೆಣ್ಣು ಸುಲಭಾ ಕೂಡ ಉದ್ಯೋಗಿಯೇ. ಶ್ರೀಮಂತ ಕುಟುಂಬದ ಒಬ್ಬಳೇ ಮಗಳು. ಸುಂದರಿಯೂ ಹೌದು. ಸಾಮಾನುಗಳು ಮಾರ್ಕೆಟ್ಟಿಗೆ ಬರುವ ಮೊದಲೇ ಇವರ ಮನೆಗೆ ಬಂದಿರುತ್ತಿದ್ದವು. ಅವನಿಗೆ ಇಬ್ಬರೂ ಗಂಡುಮಕ್ಕಳೇ. ಚಿಕ್ಕವನು ಸಂಚಿತ್ ಓದಿ, ಆಡಿಕೊಂಡು ಚೆನ್ನಾಗಿದ್ದಾನೆ. ದೊಡ್ಡವ ಸುನಯ್‌ನದ್ದೇ ಬುದ್ಧಿ ಸ್ವಲ್ಪ ಮಂದ. ವಿಶೇಷ ಶಾಲೆಯಲ್ಲಿ ಅವನ ಓದು ಸಾಗಿದೆ. ಅವರೂ ಅಥಣಿ, ಬೆಳಗಾವಿ ಎಲ್ಲ ಸುತ್ತಿ ಧಾರವಾಡಕ್ಕೆ ಬಂದಿದ್ದರು. ಅಲ್ಲಿನ 'ವಿದ್ಯಾ ಪ್ರಗತಿ' ಶಾಲೆಯಲ್ಲಿ ಸುನಯ್ ಹೊಂದಿಕೊಂಡು ಓದುತ್ತಿದ್ದ. ವಸತಿ ಶಾಲೆಯಾದರೂ ಶನಿವಾರ, ಭಾನುವಾರಗಳಲ್ಲಿ ಮನೆಗೆ ಕರೆದುಕೊಂಡು ಬರುವದಿತ್ತು. "ಅಜ್ಜಿ, ಅಜ್ಜಾ, ಕಾಕಾ..." ಎಂದೆಲ್ಲ ನಮ್ಮನ್ನೂ ಆಪ್ತವಾಗಿಸಿಕೊಂಡಿದ್ದ. ಕಿರಣನಿಗೆ ಪ್ರಮೋಷನ್ ಕೊಟ್ಟು ಚಂಡೀಗಢಕ್ಕೆ ವರ್ಗಾಯಿಸಿದರು. ಸುಲಭಾಳಿಗೂ ಅಲ್ಲೇ ದೊರಕಿದ್ದರಿಂದ